ಓಎಸ್ 107/2023

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 02.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 1ನೇ ಪ್ರತಿವಾದಿ ಪರ ವಕೀಲರಿಂದ**

ನಿಪಿ 4 ದಾಖಲೆಯು ಸರ್ವೇ ನಂಬರ್ 128/2ಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ. ನಿಪಿ 5 ಮತ್ತು 6 ಹಕ್ಕು ಬದಲಾವಣೆವಹಿಗಳು ಸಹ ದಾವ ಆಸ್ತಿಗಳಿಗೆ ಸಂಬಂಧಿಸಿದವುಗಳಲ್ಲ ಎಂದರೆ ನನಗೆ ಗೊತ್ತಿಲ್ಲ. ಬಸವಣ್ಣನವರು 1ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ ನಂತರ ಉಳಿಕೆ ಜಮೀನನ್ನು 2016 ರಲ್ಲಿ ಶ್ರೀನಿವಾಸ ಶೆಟ್ಟಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಾನು 2020ನೇ ಇಸವಿಯಲ್ಲಿ ಶ್ರೀನಿವಾಸ ಶೆಟ್ಟಿ ರವರಿಂದ ದಾವ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. 2016 ರಿಂದ 2020ನೇ ಇಸವಿಯ ವರೆಗೆ ಶ್ರೀನಿವಾಸ ಶೆಟ್ಟಿ ರವರು ಪ್ರತಿವಾದಿಗಳ ಮೇಲೆ ಯಾವುದೇ ದಾವೆ ಹಾಕಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಬಡಾವಣೆ ಮಾಡುವ ಉದ್ದೇಶದಿಂದ ಮೈಸೂರು ಊಟಿ ಮುಖ್ಯ ರಸ್ತೆಗೆ ಪಕ್ಕದಲ್ಲಿ ಆಸ್ತಿ ಬರುತ್ತದೆ ಎಂಬ ಉದ್ದೇಶದಿಂದ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಸೇರಿದ ಸರ್ವೇ ನಂಬರ್ 128/3 ರ ಆಸ್ತಿಯ ಪಶ್ಚಿಮಕ್ಕೆ 1ನೇ ಪ್ರತಿವಾದಿಗೆ ಸೇರಿದ ಸರ್ವೇ ನಂಬರ್ 128/1 ರ ಆಸ್ತಿ ಬರುತ್ತದೆ ಎಂದರೆ ಸುಳ್ಳು. ಸರ್ಕಾರದವರು ಅಭಿವೃದ್ಧಿಪಡಿಸಿರುವ ದಿಶಾಂಕ್ ಅಪ್ಲಿಕೇಶನ್ ನಲ್ಲಿಯೂ ಸಹ 1ನೇ ಪ್ರತಿವಾದಿಗೆ ಸೇರಿದ ಸರ್ವೇ ನಂಬರ್ 128/1ರ ಪೂರ್ವಕ್ಕೆ ನನಗೆ ಸೇರಿದ ಸರ್ವೇ ನಂಬರ್ 128/3ರ ಆಸ್ತಿ ಬರುತ್ತದೆ ಎಂದರೆ ಸುಳ್ಳು . ದಾವ ಆಸ್ತಿಗೆ ಸಂಬಂಧಿಸಿದ ಚೆಕ್ಕುಬಂದಿಯ ದೃಡೀಕರಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

ಓಎಸ್ 107/2023

ಪಿಡಬ್ಲ್ಯೂ 1

ದಾವ ಆಸ್ತಿಯು ಮುಖ್ಯ ರಸ್ತೆಯ ಪಕ್ಕದಲ್ಲಿ ಬರುತ್ತದೆ ಎಂದು ಹೇಳಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ